**ದಿನಾಂಕಃ 09.07.2026 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಟಿ. ವಕೀಲರಿಂದಃ–**

1. ದಿನಾಂಕಃ06.12.2019 ರಂದು ಆರೋಪಿಗೆ ನಾನು ಹಣವನ್ನು ಕೊಟ್ಟೆ ಹಣ ಕೊಟ್ಟ ದಿನವೇ ಚೆಕ್ ಕೊಟ್ಟರು. ಹಣವನ್ನು ತಾಲ್ಲೂಕು ಕಛೇರಿಯ ಮುಂಭಾಗ ಕೊಟ್ಟೆನು. ಆಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಹಣವನ್ನು ನಗದು ರೂಪದಲ್ಲಿ ಕೊಟ್ಟೆ ಎಲ್ಲಾ ರೂ.500/– ಮುಖಬೆಲೆಯ ನೋಟುಗಳಾಗಿದ್ದವು. ಆರೋಪಿಯು ನನಗೆ ಚೆಕ್ ಮಾತ್ರ ಕೊಟ್ಟರು. ಆರೋಪಿಯು ಪರಿಚಯಸ್ಥನಾಗಿದ್ದ ಕಾರಣ ಕೇವಲ ಚೆಕ್ ಮಾತ್ರ ಪಡೆದುಕೊಂಡೆ. ಆರೋಪಿಯು ತಾನು ಕಾರ್ ಲೋನ್ ಕಟ್ಟಬೇಕು ಎಂದು ಹೇಳಿ ನನ್ನಿಂದ ಹಣವನ್ನು ಸಾಲವಾಗಿ ಪಡೆದರು. ಹಣ ಪಡೆದ ಒಂದು ತಿಂಗಳ ಒಳಗಾಗಿ ಮರು ಪಾವತಿಸುವುದಾಗಿ ಹೇಳಿದ್ದರು.

2. ನಾನು ವ್ಯವಸಾಯಗಾರ ಬೇರೆ ಯಾವುದೇ ಉದ್ಯೋಗ ಇರುವುದಿಲ್ಲ. ನನ್ನ ವಾರ್ಷಿಕ ಆದಾಯ ರೂ.1,50,000/– ಇದೆ. ನನ್ನ ಉಳಿತಾಯದ ಹಣದಲ್ಲಿ ಆರೋಪಿಗೆ ಸಾಲ ಕೊಟ್ಟಿದ್ದೆ. ಚೆಕ್ ಕೊಟ್ಟಾಗ ಎಲ್ಲಾ ಬರವಣಿಗೆಗಳು ತುಂಬಿದ್ದವು ಆದರೆ ಅದನ್ನು ಆರೋಪಿಯೇ ಬರೆದರೋ ಇಲ್ಲವೋ ನನಗೆ ಗೊತ್ತಿಲ್ಲ. ದಿನಾಂಕಃ06.01.2020 ರಂದು ಚೆಕ್‌ನ್ನು ಕರ್ನಾಟಕ ಬ್ಯಾಂಕ್, ಹಿರಿಯೂರು ಶಾಖೆಗೆ ನಗದೀಕರಣಕ್ಕೆ ಸಲ್ಲಿಸಿದೆ. ವಕೀಲರ ಮೂಲಕ ಆರೋಪಿಗೆ ಕಳುಹಿಸಿರುವ ನೋಟೀಸ್‌ನ ಅಂಶಗಳು ನನಗೆ ಗೊತ್ತು.

3. ನನ್ನ ಕುಟುಂಬದ ನಿರ್ವಹಣೆಗೆ ಸುಮಾರು 7–8 ಸಾವಿರ ಖರ್ಚು ಮಾಡುತ್ತೇನೆ. ನಾನು ಯಾವುದೇ ಹಣ ಉಳಿತಾಯ ಮಾಡಿಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಹೊರತುಪಡಿಸಿ ಮತ್ತೂಬ್ಬ ಮಂಜುನಾಥ್ ಎನ್ನುವವರಿಗೆ ಸಾಲ ಕೊಟ್ಟಿದ್ದೇನೆ. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಸಾಲ

ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಬಡ್ಡಿಯ ಆಸೆಗಾಗಿ ಚೆಕ್ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಸಾಲ ಪಡೆದಿದ್ದ ರೂ.80,000/- ಹಣವನ್ನು ಈಗಾಗಲೇ ವಾಪಾಸ್ ನೀಡಿದ್ದು ಹಣದ ಭದ್ರತೆಗಾಗಿ ನೀಡಿದ್ದ ಚೆಕ್‌ನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. **ಮುಂದುವರಿದ ಪಾಟೀ-ಸವಾಲಿಗೆ ದೂರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕೈತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.